ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಮಂಡ್ಯ ನಗರದ ಮಹಾವೀರ ವೃತ್ತದಲ್ಲಿ ನಗರಸಭೆ ಮಳಿಗೆಗಳ ಹಿಂಭಾಗ ಸಿಲ್ವರ್ ಜುಬಿಲಿ ಪಾರ್ಕ್ ಪಕ್ಕದಲ್ಲಿರುವ ಜಾಗವನ್ನು ಪಡೆಯಲು ಸಮಿತಿ ತೀರ್ಮಾನಿಸಿದ್ದು ನಗರದಲ್ಲಿ ಸಾರ್ವಜನಿಕ ಸಭೆ ಸಮಾರಂಭಗಳಿಗೆ ಗುರುತಿಸಿದ ಸ್ಥಳವಾಗಿದ್ದು ರೈತರ ಸಂತೆ ಸ್ಥಾಪನೆಗೆ ದೊರಕುವುದಿಲ್ಲವೆಂದು ತಿಳಿಸಿದ ಮೇರೆಗೆ ಕೈಬಿಡಲಾಗಿದೆ.

ಬೇರೆ ಸ್ಥಳದ ಲಭ್ಯತೆ ಇಲ್ಲದಿರುವುದರಿಂದ ಈವರೆವಿಗೆ ರೈತರ ಸಂತೆ ಸ್ಥಾಪನೆ ಸಾಧ್ಯವಾಗಿರುವುದಿಲ್ಲ.

ಇ) ಆರ್.ಐ.ಡಿ.ಎಫ್. ಯೋಜನೆಯಡಿ ರಾಜ್ಯದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ವ್ಯಾಪ್ತಿಯಲ್ಲಿ ಗ್ರಾಮೀಣ ಸಂತೆಗಳನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲು ಕ್ರಮ ಜರುಗಿಸಿದೆ.

ಈ) ತೆರೆದ/ಮುಚ್ಚಿದ ಹರಾಜುಕಟ್ಟೆ, ನೀರಿನ ಸೌಲಭ್ಯ, ಶೌಚಾಲಯ, ಸೋಲಾರ್ ವಿದ್ಯುತ್ ಸಂಪರ್ಕ ಹಾಗೂ ಸಿಮೆಂಟ್ ಕಾಂಕ್ರೀಟ್ ಪೇವ್‌ಮೆಂಟ್ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗುವುದು.

713 ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ): ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ರಾಜ್ಯದ ರೈತರಿಗೆ ಕಬ್ಬು ಬೆಳೆಯಲು ಸರ್ಕಾರ ನೀಡುತ್ತಿರುವ ಪ್ರೋತ್ಸಾಹವೇನು;

ಆ) ಸಂಕಷ್ಟಗಳಿಗೆ ಸಿಲುಕಿದ ಕಬ್ಬು ಬೆಳೆಗಾರರಿಗೆ ಸರ್ಕಾರದಿಂದ ದೊರಕುವ ಸವಲತ್ತುಗಳಾವುವು;

ಇ) ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು; ಅವು ಯಾವುವು; (ವಿವರ ಒದಗಿಸುವುದು)

ಈ) ನಷ್ಟದಲ್ಲಿರುವ ಸಕ್ಕರೆ ಕಾರ್ಖಾನೆಯ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು;

ಉ) ಕಳೆದ 3 ವರ್ಷಗಳಲ್ಲಿ ಸಕ್ಕರೆ ಕಾರ್ಖಾನೆಗಳಿಗಾಗಿ ಒದಗಿಸಲಾಗಿರುವ ಒಟ್ಟು ಸಹಾಯ ಧನವೆಷ್ಟು; (ವರ್ಷಾವಾರು ವಿವರ ಒದಗಿಸುವುದು)?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು):

ಅ) ರಾಜ್ಯದಲ್ಲಿ 2006–07 ಮತ್ತು 2007–08ನೇ ಸಾಲಿನಲ್ಲಿ ಹೆಚ್ಚಿನ ಕಬ್ಬು ಉತ್ಪಾದನೆ ಆದ ಪ್ರಯುಕ್ತ ರಾಜ್ಯದ ರೈತರು ತಮ್ಮ ಕಬ್ಬು ವಿಲೇವಾರಿಯಾಗದೇ ಸಂಕಷ್ಟಕ್ಕೆ ಸಿಲುಕಿದ್ದರ ಹಿನ್ನೆಲೆಯಲ್ಲಿ ರಾಜ್ಯದ ರೈತರು ಬೆಳೆದ ಎಲ್ಲಾ ಕಬ್ಬನ್ನು ನುರಿಸಬೇಕೆಂಬ ಉದ್ದೇಶದಿಂದ ಸರ್ಕಾರವು ಕಬ್ಬು ಬೆಳೆಗಾರರಿಗೆ ಹಾಗೂ ಸಕ್ಕರೆ ಕಾರ್ಖಾನೆಗಳಿಗೆ ಈ ಕೆಳಕಾಣಿಸಿದ ಸೌಲಭ್ಯಗಳನ್ನು ಘೋಷಿಸಿರುತ್ತದೆ.

ವರ್ಷ	ಸೌಲಭ್ಯ
2006–07	1) 12 ತಿಂಗಳು ಪೂರೈಸಿ ಪಕ್ವವಾದ ಹಾಗೂ ಕಟಾವಾಗದೆ ಜಮೀನಿನಲ್ಲಿ ಉಳಿದ ಕಬ್ಬಿಗೆ ರೈತರಿಗೆ ಪ್ರತಿ ಹೆಕ್ಟೇರಿಗೆ ರೂ. 25000/–ಗಳಂತೆ ಪರಿಹಾರಧನ. 2) ನೆರೆ ರಾಜ್ಯಗಳಿಗೆ ಸರಬರಾಜಾದ ಕಬ್ಬನ್ನು ಒಳಗೊಂಡಂತೆ 50 ಕಿ.ಮೀ.ಗಿಂತ ಹೆಚ್ಚಿನ ದೂರಕ್ಕೆ ಸಾಗಾಣಿಕೆ ಮಾಡಿದ ಪ್ರತಿ ಟನ್ ಕಬ್ಬಿಗೆ ಪ್ರತಿ ಕಿ.ಮೀ.ಗೆ ರೂ.2/–ರಂತೆ ಸಾಗಾಣಿಕೆ ಸಹಾಯಧನ. 3) ದಿನಾಂಕ 16.4.07 ರಿಂದ 31.7.2007ರವರೆಗೆ ಸಕ್ಕರೆ ಕಾರ್ಖಾನೆಗಳು ವಿಸ್ತರಿಸಿದ ಅವಧಿಯಲ್ಲಿ ನುರಿಸಿದ ಕಬ್ಬಿಗೆ ಪ್ರತಿ ಟನ್ನಿಗೆ ರೂ.100/–ರಂತೆ ಸಹಾಯಧನ.

2007–08	1) ದಿನಾಂಕ 1.4.2008 ರಿಂದ 31.7.2008ರವರೆಗೆ ವಿಸ್ತರಿಸಿದ ಅವಧಿಯಲ್ಲಿ ಕಾರ್ಖಾನೆಗಳಲ್ಲಿ ನುರಿಸಲಾದ ಕಬ್ಬಿಗೆ ಪ್ರತಿ ಮೆ.ಟನ್ನಿಗೆ ರೂ.100/–ರಂತೆ ಸಹಾಯಧನ. 2) 30 ಕಿ.ಮೀ.ಗೆ ಮೀರಿದ ದೂರದಿಂದ ಸಾಗಾಣಿಕೆ ಮಾಡಿದ ಕಬ್ಬಿಗೆ ಪ್ರತಿ ಟನ್ನಿಗೆ/ಪ್ರತಿ ಕಿ.ಮೀ.ಗೆ ರೂ.2/–ರಂತೆ ಸಾಗಾಣಿಕೆ ಸಹಾಯಧನ 3) ರಾಜ್ಯದ ಸಕ್ಕರೆ ಕಾರ್ಖಾನೆಗಳೂ ರಫ್ತು ಮಾಡಲಾದ ಸಕ್ಕರೆಗೆ ಪ್ರತಿ ಕ್ವಿಂಟಾಲಿಗೆ ರೂ.100/–ರಂತೆ ರಫ್ತು ಸಹಾಯಧನ.

ಸಕ್ಕರೆ ಕಾರ್ಖಾನೆಗಳು ರೈತರು ಬೆಳೆದ ಎಲ್ಲಾ ಕಬ್ಬನ್ನು ನುರಿಸಬೇಕೆಂದು ಹಾಗೂ ರೈತರಿಗೆ ಸಕಾಲಕ್ಕೆ ಕಬ್ಬು ಬೆಲೆ ಪಾವತಿಯನ್ನು ಮಾಡಬೇಕೆಂಬ ಉದ್ದೇಶದಿಂದ ಸಕ್ಕರೆ ಕಾರ್ಖಾನೆಗಳಿಗೆ ಸಹಾಯಧನ ಹಾಗೂ ಕಟಾವಾಗದೇ ಉಳಿದ ರೈತರ ಕಬ್ಬಿಗೆ ಪರಿಹಾರ ಧನವನ್ನು ಘೋಷಿಸಿ ರೈತರಿಗೆ ಕಬ್ಬು ಬೆಳೆಯಲು ಪ್ರೋತ್ಸಾಹ ನೀಡಲಾಗಿದೆ.

ಆ) ಪ್ರಶ್ನೆ ಸಂಖ್ಯೆ (1)ರಲ್ಲಿ ನೀಡಿದ ಉತ್ತರವೇ ಅನ್ವಯವಾಗುವುದು.

ಇ) ರಾಜ್ಯದಲ್ಲಿ ಒಟ್ಟು 61 ಸಕ್ಕರೆ ಕಾರ್ಖಾನೆಗಳಿವೆ. ಕಾರ್ಖಾನೆಗಳ ವಿವರ ಅನುಬಂಧದಲ್ಲಿ ನೀಡಲಾಗಿದೆ.

ಈ) ಆರ್ಥಿಕ ಸಂಕಷ್ಟದಲ್ಲಿದ್ದ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಪುನಃಶ್ಚೇತನಗೊಳಿಸುವ ಉದ್ದೇಶದಿಂದ ಆರ್ಥಿಕ ಸಂಕಷ್ಟದಲ್ಲಿದ್ದ 7 ಹಾಗೂ ನಿರ್ಮಾಣ ಹಂತದಲ್ಲಿದ್ದು ನಿರ್ಮಾಣ ಕಾರ್ಯ ಕೈಗೊಳ್ಳಲು ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದ್ದ 3 ಸಹಕಾರಿ ಸಕ್ಕರೆ ಕಾರ್ಖಾನೆಗಳು ಸೇರಿ ಒಟ್ಟು 10 ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಗುತ್ತಿಗೆ ಆಧಾರದ ಮೇಲೆ ಗುತ್ತಿಗೆಗೆ ನೀಡಲಾಗಿದೆ. ಇದರಿಂದ ರೈತರ, ಕಾರ್ಮಿಕರ ಹಾಗೂ ಸ್ಥಳೀಯ ಆರ್ಥಿಕ ಸ್ಥಿತಿ ಸುಧಾರಣೆಯಾಗಲು ಸಹಾಯಕವಾಗಿದೆ.

ಉ) ರಾಜ್ಯದಲ್ಲಿ 2006–07 ಮತ್ತು 2007–08ನೇ ಸಾಲಿನಲ್ಲಿ ರಾಜ್ಯದ ರೈತರು ಬೆಳೆದ ಎಲ್ಲಾ ಕಬ್ಬನ್ನು ನುರಿಸಬೇಕೆಂಬ ಹಿನ್ನೆಲೆಯಲ್ಲಿ ಸರ್ಕಾರವು ಸಕ್ಕರೆ ಕಾರ್ಖಾನೆಗಳಿಗೆ ಈ ಕೆಳಕಾಣಿಸಿದ ಸೌಲಭ್ಯಗಳನ್ನು ಘೋಷಿಸಿರುತ್ತದೆ.

(ರೂ.ಲಕ್ಷಗಳಲ್ಲಿ)

ವರ್ಷ	ಸೌಲಭ್ಯ	ಸರ್ಕಾರದಿಂದ ಬಿಡುಗಡೆ ಮಾಡಿರುವ ಸಹಾಯಧನ ಮೊತ್ತ
2006–07	1) ನೆರೆ ರಾಜ್ಯಗಳಿಗೆ ಸರಬರಾಜಾದ ಕಬ್ಬನ್ನು ಒಳಗೊಂಡಂತೆ 50 ಕಿ.ಮೀ.ಗಿಂತ ಹೆಚ್ಚಿನ ದೂರಕ್ಕೆ ಸಾಗಾಣಿಕೆ ಮಾಡಿದ ಪ್ರತಿ ಟನ್ ಕಬ್ಬಿಗೆ ಪ್ರತಿ ಕಿ.ಮೀ.ಗೆ ರೂ.2/–ರಂತೆ ಸಾಗಾಣಿಕೆ ಸಹಾಯಧನ	698.28
	2) ದಿನಾಂಕ 16.4.2007 ರಿಂದ 31.7.2007ರವರೆಗೆ ಸಕ್ಕರೆ ಕಾರ್ಖಾನೆಗಳು ನುರಿಸಿದ ಕಬ್ಬಿಗೆ ಪ್ರತಿ ಟನ್ನಿಗೆ ರೂ. 100/–ರಂತೆ ಸಹಾಯಧನ	3988.84
	ಒಟ್ಟು (1)	**4687.12**
2007–08	1) ದಿನಾಂಕ 1.4.2008 ರಿಂದ 31.7.2008ರವರೆಗೆ ವಿಸ್ತರಿಸಿದ ಅವಧಿಯಲ್ಲಿ ಕಾರ್ಖಾನೆಗಳಲ್ಲಿ ನುರಿಸಲಾದ ಕಬ್ಬಿಗೆ ಪ್ರತಿ ಮೆ.ಟನ್ನಿಗೆ ರೂ.100/–ರಂತೆ ಸಹಾಯಧನ	1933.39

ವರ್ಷ	ಸೌಲಭ್ಯ	ಸರ್ಕಾರದಿಂದ ಬಿಡುಗಡೆ ಮಾಡಿರುವ ಸಹಾಯಧನ ಮೊತ್ತ
	2) 30 ಕಿ.ಮೀ.ಗೆ ಮೀರಿದ ದೂರದಿಂದ ಸಾಗಾಣಿಕೆ ಮಾಡಿದ ಕಬ್ಬಿಗೆ ಪ್ರತಿ ಟನ್ನಿಗೆ/ ಪ್ರತಿ ಕಿ.ಮೀ.ಗೆ ರೂ.2/–ರಂತೆ ಸಾಗಾಣಿಕೆ ಸಹಾಯಧನ	1127.57
	3) ರಾಜ್ಯದ ಸಕ್ಕರೆ ಕಾರ್ಖಾನೆಗಳು ರಫ್ತು ಮಾಡಲಾದ ಸಕ್ಕರೆಗೆ ಪ್ರತಿ ಕ್ವಿಂಟಾಲಿಗೆ ರೂ.100/–ರಂತೆ ರಫ್ತು ಸಹಾಯಧನ	604.24
	ಒಟ್ಟು (2)	**3665.20**
	ಒಟ್ಟು ನಿವ್ವಳ	**8352.32**

2008–09ನೇ ಸಾಲಿನಲ್ಲಿ ಯಾವುದೇ ಸಹಾಯಧನ ಸೌಲಭ್ಯ ಘೋಷಿಸಿರುವುದಿಲ್ಲ.

ಅನುಬಂಧ

DISTRICT-WISE SUGAR FACTORIES IN KARNATAKA

Sl. No.	District	Taluk	Name of the sugar factory		Sector
1	Belgaum	Khanapur	1	Bhagyalaxmi SSK Ltd., Kuppatagiri*	Co-operative

Sl. No.	District	Taluk	Name of the sugar factory		Sector
		Chikodi	2	Doodhaganga Krishna SSK Ltd., Nanadi	Co-operative
			3	Halasiddanatha SSK Ltd., Nipani	Co-operative
			4	Venkateshwara Sugars Ltd., Bedkihal	Private
		Gokak	5	Ghataprabha SSK Ltd., Gokak	Co-operative
			6	Sathish Sugars Ltd., Hunashyal	Private
		Hukkeri	7	Hiranyakeshi SSK Ltd., Sankeshwara	Co-operative
			8	Vishwanath Sugars Ltd., Belladabagewadi	Private
		Bailahongal	9	Malaprabha SSK Ltd., M.K. Hubli	Co-operative

Sl. No.	District	Taluk	Name of the sugar factory		Sector
			10	Someshwara SSK Ltd., Siddasamudra	Co-operative
		Raibag	11	Raibag SSK Ltd., Raibag*	Co-operative
		Athani	12	Krishna SSK Ltd., Haliyal	Co-operative
			13	Ugar Sugars Ltd., Ugarkhurd	Private
			14	Athani Farmers Sugars Ltd., Kempwad	Private
			15	Renuka Sugars Ltd., Burlatti	Private
		Saundatti	16	Sree Renuka Sugars Ltd., Manoli	Private
		Ramadurga	17	Dhanalakshmi SSK**	Co-operative
		Gokak	18	Gokak Sugars, Kolavi**	Private
2	Bellary	Hospet	19	India Sugars & Refineries Ltd.	Private

Sl. No.	District	Taluk	Name of the sugar factory		Sector
			20	Sundari Sugars Ltd., Kampli*	Private
		Sirguppa	21	Sirguppa Sugars Ltd., Deshanur	Private
3	Bidar	Bidar	22	Bidar SSK Ltd., Hallikhed	Co-operative
			23	Naranja SSK Ltd., Imampur	Co-operative
			24	Bhavani Sugars Ltd., Baroor	Private
		Bhalki	25	Mahatma Gandhi SSK Ltd., Hichakmath	Co-operative
4	Bijapur	Bijapur	26	Nandi SSK Ltd., Krishnanagar	Co-operative
		Ipdi	27	Dhyanayogi Shivakumar Swamiji Sugars Ltd., Hirebevanur	Private
5	Bagalkot	Mudhol	28	Raithara SSK Ltd., Timmapur	Co-operative

Sl. No.	District	Taluk	Name of the sugar factory		Sector
			29	Godavari Sugars Ltd., Sameerwadi	Private
		Jamkhandi	30	Prabhulinge-shwar Sugars Ltd., Siddapur	Private
			31	Jamkhandi Sugars Ltd., Jamkhandi	Private
		Bilagi	32	Bilagi Sugars mills Ltd.,	Private
		Mudhol	33	Nirani Sugars Ltd., Mudhol	Private
		Bilagi	34	Gem Sugars Ltd., Bilagi	Private
		Badami	35	Badami Sugars Ltd., Kerakalamatti	Private
			36	Kedarnath Sugars**	Private
		Bagalkot	37	Sadashiva Sugars**	Private

Sl. No.	District	Taluk	Name of the sugar factory		Sector
6	Chamaraja Nagara	Kollegal	38	Mahadeshwara Sugars Ltd., Kunturu*	Private
7	Chitradurga	Hiriyuru	39	Vani vilasa SSK* Ltd., Hiriyur	Co-operative
8	Davanagere	Davanagere	40	Bhadra SSK Ltd.,* Doddabathi	Co-operative
			41	Davangere Sugars Ltd., Kukkawada	Private
		Harappanalli	42	Shamanur Sugars Ltd., Duggavathi	Private
9	Gulbarga	Aland	43	Aland SSK Ltd., Bhusnoor*	Co-operative
		Afzalpur	44	Renuka Sugars Ltd., Havalaga	Private
		Jewargi	45	Ugar Sugars**	Private
10	Hassan	Channaraya patna	46	Hemavathi SSK Ltd., Srinivasapur	Co-operative

Sl. No.	District	Taluk	Name of the sugar factory		Sector
11	Kolar	Gowribidanur	47	Siruguppa Sugars* & Chemicals Ltd., Gowribidanur	Private
12	Koppal	Gangavathi	48	Gangavathi Sugars* Ltd., Pragathinagar	Joint
13	Mandya	Pandava pura	49	Pandavapura SSK Ltd., Pandavapura	Co-operative
		Mandya	50	Mysore Sugar Company Ltd., Mandya	Public
		Maddur	51	Sri Chamun-deswari Sugars Ltd.,	Private
		Maddur	52	S.C.M. Sugars Ltd., Koppa	Private
		K.R. Pet	53	I.C.L. Ltd., Makkavalli	Private
14	Mysore	K.R. Nagara	54	Sri Sree Rama SSK Ltd., Chunchunakatte	Co-operative

Sl. No.	District	Taluk	Name of the sugar factory		Sector
		Nanjungud	55	Bannari Amman Sugars Ltd., Alaganchi	Private
15	Shimoga	Bhadravathi	56	M.P.M. Sugars Ltd., Bhadravathi	Public
		Shimoga	57	Devi Sugars Ltd.,* Shimoga	Private
16	Udupi	Udupi	58	Dakshina Kannada SSK Ltd., * Brahmavara	Co-operative
17	Haveri	Haveri	59	Karnataka SSK Ltd., Sangur	Co-operative
18	Bangalore Rural	Ramanagara	60	S.P.R. Sugars Ltd., Kanchugarana halli	Private
19	Uttara Kannada	Haliyala	61	GMR Industries **	Private

ABSTRACT:

CO-OPERATIVE -23

PUBLIC SECTOR -02

JOINT SECTOR	-01
PRIVATE SECTOR	-35
TOTAL	**-61**

Note: * These sugar factories are not working at present

** New Sugar factories

810 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ: ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಸಹಕಾರಿ ರಂಗವನ್ನು ಪುನರುಜ್ಜೀವನಗೊಳಿಸುವ ದೃಷ್ಟಿಯಿಂದ ಕೇಂದ್ರ ಸರ್ಕಾರದ ಪ್ರೊಫೆಸರ್ ಎ. ವೈದ್ಯನಾಥನ್ ನೇತೃತ್ವದ ಸಮಿತಿಯ ವರದಿಯನ್ನು ರಾಜ್ಯ ಸರ್ಕಾರ ಒಪ್ಪಿದೆಯೇ;

ಆ) ಹಾಗಿದ್ದಲ್ಲಿ, ಈ ವರದಿಯ ಮುಖ್ಯಾಂಶಗಳೇನು; ಈ ಬಗ್ಗೆ ಕೇಂದ್ರದ ಜೊತೆ ಎಷ್ಟು ಬಾರಿ ಚರ್ಚಿಸಲಾಗಿದೆ;

ಇ) ಈ ವರದಿಯಿಂದ ರಾಜ್ಯಕ್ಕೆ ಅನುಕೂಲವಾಗಿದೆಯೇ; (ವಿವರ ಒದಗಿಸುವುದು)

ಈ) ಈ ವರದಿಯನ್ನು ಜಾರಿಗೊಳಿಸುವ ಸಂಬಂಧ ಸಲಹೆ ನೀಡಲು ಸರ್ಕಾರವು ರಚಿಸಿರುವ ಸಮಿತಿಯು ಎಷ್ಟು ಬಾರಿ ಯಾವ ಯಾವ ಸ್ಥಳಗಳಲ್ಲಿ ಸಭೆ ಸೇರಿ ಚರ್ಚೆ ನಡೆಸಿದೆ; ಇದರ ಫಲಶ್ರುತಿ ಏನು;

ಉ) ಹಿಂದುಳಿದ ಬೀದರ್ ಜಿಲ್ಲೆಯ ಸಹಕಾರಿ ಸಂಸ್ಥೆಗಳಿಗೆ ಈ ವರದಿಯ ಅನುಸಾರ ಪುನಃಶ್ಚೇತನಕ್ಕಾಗಿ ಯಾವ ಯಾವ ಪ್ಯಾಕೇಜ್‌ಗಳು ಲಭ್ಯವಿದೆ?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು):

ಅ) ಪ್ರೊ॥ ಎ. ವೈದ್ಯನಾಥನ್ ಕಾರ್ಯಪಡೆಯ ಶಿಫಾರಸ್ಸುಗಳ ಆಧಾರದ ಮೇಲೆ ಭಾರತ ಸರ್ಕಾರವು ರೂಪಿಸಿರುವ ಪುನಃಶ್ಚೇತನ ಪ್ಯಾಕೇಜನ್ನು